ರೂಪದಲ್ಲಿ ಮುಖ್ಯವಾಗಿ ಚರ್ಚೆಯಾಗಬೇಕು ರೂಲ್ 69, ಮತ್ತೊಂದು ರೂಪದಲ್ಲಿ ಚರ್ಚೆಗೆ ಅವಕಾಶ ಮಾಡಿಕೊಡುವುದಕ್ಕೆ ತಮಗೆ ಅಧಿಕಾರವಿದೆ ನಾವು ಪ್ರಸ್ತಾಪ ಮಾಡುತ್ತೇವೆ ಆಮೇಲೆ ತಾವು ಯಾವುದೇ ರೂಪದಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು: ಆಯಿತು ಅದನ್ನು ಚರ್ಚೆ ಮಾಡೋಣ.

ಶ್ರೀ ಟಿ.ಬಿ. ಜಯಚಂದ್ರ: ಅವರೇ ನೇರವಾಗಿ ನಿಯಮ 69ರ ಅಡಿಯಲ್ಲಿ ತರಲಿ ಚರ್ಚೆ ಮಾಡೋಣ, ಇದನ್ನು ನಿಲುವಳಿ ಸೂಚನೆಯಲ್ಲಿ ತಂದರೆ ಸದನ ಹೇಗೆ ನಡೆಯುವುದು?

ಅಧ್ಯಕ್ಷರು: ಅವತ್ತೆ ನಾನು ಹೇಳಿದ್ದೇನೆ. ಮೊನ್ನೆ ಮಾನ್ಯ ಯಡಿಯೂರಪ್ಪನವರು ಈ ವಿಷಯವನ್ನು ಪ್ರಸ್ತಾಪ ಮಾಡಿದಾಗ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆಂದು ನಾನೇ ಹೇಳಿದ್ದೇನೆ ಅವಕಾಶ ಕೊಡುತ್ತೇನೆ

ಶ್ರೀ ಜಗದೀಶ್ ಶೆಟ್ಟರ್: ಅವಕಾಶ ಕೊಡಿ

ಅಧ್ಯಕ್ಷರು: ಅವಕಾಶ ಕೊಡುತ್ತೇನೆ. ಅವತ್ತೆ ಹೇಳಿದ್ದೇನೆ, ಚರ್ಚೆಗೆ ಅವಕಾಶದವಿದೆ, ಕೊಡೋಣ ಪ್ರಶ್ನೋತ್ತರವಾಗಲಿ ನೀವು ಕುಳಿತುಕೊಳ್ಳಿ

(ಗೊಂದಲ)

ಮಾನ್ಯ ಸದಸ್ಯರೊಬ್ಬರು: ಮಾನ್ಯ ಅಧ್ಯಕ್ಷರೆ, ಇಲ್ಲಿ ಯಾರು ಯಾರ ಪರವಾಗಿ ವಕಾಲತ್ ವಹಿಸುತ್ತಿದ್ದಾರೆನ್ನುವುದು ಗೊತ್ತಾಗುತ್ತಿಲ್ಲ

2) ಎಂ.ಇ.ಎಸ್ ಸದಸ್ಯರು ಕರ್ನಾಟಕದ ಬಗ್ಗೆ ನೀಡಿರುವ ಹೇಳಿಕೆ.

ಶ್ರೀ ಎಸ್. ಸುರೇಶ್ ಕುಮಾರ್: ನಿನ್ನೆ ಈ ಸದಸ್ಯರೊಬ್ಬರು ನಾಲ್ಕು ಜನರಿದ್ದಾರೆ ಕರ್ನಾಟಕ ಸರ್ಕಾರದ ಶವವನ್ನು ನಾವು ಹೊರುತ್ತೇವೆಂದು ಹೇಳಿದ್ದಾರೆ ಇಡೀ ರಾಜ್ಯದಲ್ಲಿ ಇದರ ಬಗ್ಗೆ ತೀವ್ರವಾದ ಪ್ರತಿಕ್ರಿಯೆ ಹರಡುತ್ತಿದೆ. ಅದಕ್ಕೊಸ್ಕರ ನಾನು ಸಭಾನಾಯಕರಾದ ಮುಖ್ಯಮಂತ್ರಿಗಳನ್ನು ಇದರ ಬಗ್ಗೆ ಗಮನ ಸೆಳೆಯುತ್ತಾ, ದಯವಿಟ್ಟು ಈ ರಿತಿಯ ಪ್ರಸಂಗಗಳು

ಮರುಕಳಿಸದ ರೀತಿಯಲ್ಲಿ ಸದಸ್ಯರಿಗೆ ಯಾವರೀತಿ ಸೂಚನೆ ಕೊಡುತ್ತೀರೋ ಕೊಡಿ. ಇದು ಒಳ್ಳೆಯದು ಅಲ್ಲ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ ಈ ಸದನದ ಒಬ್ಬ ಸದಸ್ಯರಾಗಿ ಇವತ್ತು ಸರ್ಕಾರದ ಬಗ್ಗೆ ಶಾಸಕರ ಬಗ್ಗೆ, ಕನ್ನಡ ಭಾಷೆಯ ಬಗ್ಗೆ ಹಗುರವಾಗಿ ಮಾತನಾಡುವುದು ಸರಿಯಲ್ಲ. ಆ ರೀತಿ ಮಾತನಾಡಿದವರ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಇಲ್ಲದಿದ್ದರೆ ಪ್ರಚೋದನೆಯಾಗುತ್ತದೆ, ಕಾನೂನು ಸುವ್ಯವಸ್ಥೆಗೆ ತೊಂದರೆಯಾಗುತ್ತದೆ ಶಾಸಕರು ಜವಾಬ್ದಾರಿಯಿಂದ ನಡೆದುಕೊಳ್ಳಬೇಕಾಗುತ್ತದೆ. ಈ ಮನೆಯ ಸದಸ್ಯರೊಬ್ಬರು ಸರ್ಕಾರದ ಬಗ್ಗೆ ಹಗುರವಾಗಿ ಮಾತನಾಡುವುದು ಸರಿಯಲ್ಲ, ಸರ್ಕಾರ ಇದನ್ನು ಹಗುರವಾಗಿ ತೆಗೆದುಕೊಳ್ಳದೆ ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕು

ಮಾನ್ಯ ಸದಸ್ಯರೊಬ್ಬರು: ಅವರನ್ನು ಸದನದಿಂದ ಹೊರಗೆ ಹಾಕಬೇಕು

(ಗೊಂದಲ)

ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಅವರು ಶೂನ್ಯವೇಳೆಯಲ್ಲಿ ಒಂದು ನೋಟಿಸ್ ಕೊಟ್ಟಿದ್ದಾರೆ, ಶೂನ್ಯವೇಳೆಯಲ್ಲಿ ಆ ವಿಷಯ ಪ್ರಸ್ತಾಪ ಮಾಡಲಿ ಉತ್ತರ ಕೊಡೋಣ. ಆದರೆ ಒಬ್ಬ ಶಾಸಕರು, ಈ ಮನೆಯ ಸದಸ್ಯರು, ಅವರು ಯಾವುದೇ ಪಕ್ಷಕ್ಕೆ ಸೇರಿರಲಿ. ಎಂಇಎಸ್ ಪಾರ್ಟಿಗೆ ಸೇರಿರುವ ಶಾಸಕರು ಸದನದ ಹೊರಗಡೆ ಮಾತನಾಡಿದ್ದಾರೆ, ಅವರು ಮಾತನಾಡಿದ್ದು ಸರಿ ಎಂದು ನಾನು ಹೇಳುವುದಕ್ಕೆ ಹೊಗುವುದಿಲ್ಲ, ಅದನ್ನು ನಾನು ತೀವ್ರವಾಗಿ ಖಂಡಿಸುತ್ತೇನೆ. ಕನ್ನಡದ ಬಾಷೆ ಬಗ್ಗೆ ಆಗಲಿ,ಕರ್ನಾಟಕ ರಾಜ್ಯದ ಬಗ್ಗೆ ಆಗಲಿ, ಸರ್ಕಾರದ ಬಗ್ಗೆ ಆಗಲಿ ಮಾನ್ಯ ಸದಸ್ಯರುಗಳ ಬಗ್ಗೆ ಆಗಲಿ, ಈ ಶಾಸನ ಸಭೆಯ ಬಗ್ಗೆ ಆಗಲಿ ಹಗುರವಾಗಿ ಅವಹೇಳನವಾಗಿ ಮಾತನಾಡುವುದು ಯಾರಿಗೂ ಕೂಡ ಶೋಭೆ ತರತಕ್ಕಂಧಲ್ಲ. ನಾವು ಕರ್ನಾಟಕದಲ್ಲಿದ್ದೇವೆ ಎನ್ನುವುದು ಹೆಮ್ಮೆಪಡುವ ವಿಚಾರವಾಗಿದೆ, ಅವರೂ ಕೂಡ ಕರ್ನಾಟಕದವರಾಗಿದ್ದಾರೆ

ಕರ್ನಾಟಕದಲ್ಲಿರುವ ಕನ್ನಡ ಭಾಷೆ ಈ ರಾಜ್ಯದ ರಾಜ್ಯ ಭಾಷೆ, ಅದರೆ ಬಗ್ಗೆ ಯಾರಾದರೂ ಕೂಡ ಅಗೌರವವಾಗಿ ಯಾರೇ ಮಾತನಾಡಿದರೆ ಅದು ಅವರಿಗೆ ಶೋಭೆ ತರುವಂಥದ್ದಲ್ಲ, ಅದಕ್ಕೆ ಕಾನೂನು ರೀತಿಯಲ್ಲಿ ಕ್ರಮತೆಗೆದು ಕೊಳ್ಳುವುದಕ್ಕೆ ಅವಕಾಶವಿದೆಯೇ ಎಂಬುವುದನ್ನು ಕೂಡ ಪರೀಶಿಲನೆ ಮಾಡೋಣ ಜೊತೆಗೆ ಆ ಸದಸ್ಯರಿಗೂ ಕೂಡ ಹೇಳುವುದೆನೆಂದರೆ, ಈ ರೀತಿ ಮುಂದೆ ಮಾನಾಡಬಾರದು. ಇದನ್ನು ನಾನು ತೀವ್ರವಾಗಿ ಕರ್ನಾಟಕದ ಜನರ ಪರವಾಗಿ ಕನ್ನಡ ಭಾಷೆಯ ಬಗ್ಗೆ ಯಾರಾದರೂ ಹಗುರವಾಗಿ ಮಾತನಾಡಿದರೆ ಅದನ್ನು ಯಾರೂ ಕೂಡ ಸಹಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲವೆನ್ನುವುದನ್ನು ಕೂಡ ಬಹಳ ಸ್ಪಷ್ಟವಾಗಿ ಹೇಳುತ್ತೇನೆ, ನಾನು ಇದನ್ನು ತೀವ್ರವಾಗಿ ಖಂಡಿಸುತ್ತೇನೆ

ಶ್ರೀ ಹೆಚ್ ಡಿ ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, ತಮ್ಮ ಗಮನಕ್ಕೆ ತರುವುದು ಸರ್ಕಲ್‌ನಲ್ಲಿ ಮರಾಠಿಗರ ಹೆಸರು ಹಾಕಿ ಒಂದು ಧ್ವಜ ಸ್ಥಾಪನೆ ಮಾಡಿದರು. ಅದರ ವಿರುದ್ಧ ಹೋರಾಟ ಮಾಡಿದಂತಹ ಸುಮಾರು 70 ರಿಂದ 80 ವರ್ಷ ವಯಸ್ಸಾಗಿರುವ ಕನ್ನಡ ಚಳವಳಿಗಾರರ ಮೇಲೆ ಹಾಗೂ ಒಟ್ಟು 100 ಜನರ ಮೇಲೆ ನಮ್ಮ ಪೊಲೀಸ್ ಅಧಿಕಾರಿಗಳು ಕೇಸ್ ಬುಕ್ ಮಾಡಿದ್ದಾರೆ. ಕನ್ನಡ ಚಳುವಳಿಗಾರರು ಕನ್ನಡದ ಪರವಾಗಿ ಹೋರಾಟ ಮಾಡಿದ್ದೇ ತಪ್ಪಾ? ಕನ್ನಡಿಗರಿಗೆ ರಕ್ಷಣೆ ಕೊಡುವ ವಿಷಯದಲ್ಲಿ ಬೆಳಗಾವಿಯಲ್ಲಿ ಕನ್ನಡ ಭಾಷೆಯನ್ನು ಉಳಿಸುವುದಕ್ಕಾಗಿ ಶಾಂತಿಯುತವಾಗಿ ಹೋರಾಟ ಮಾಡಿದ ಕೆಲವು ಕನ್ನಡ ಚಳುವಳಿಗಾರರು ಹಿರಿಯರಿದ್ದಾರೆ. ಅವರ ಮೇಲೆಲ್ಲಾ ಕೇಸ್ ಹಾಕಿದ್ದಾರೆ. ಅವರು ಜಾಮೀನು ತೆಗೆದುಕೊಳ್ಳುವ ಪರಿಸ್ಥಿತಿ ನಿರ್ಮಾಣ ವಾಗಿದೆ.ಇವರ ಮೇಲೆ ಹಾಕಿರುವ ಕೇಸುಗಳನ್ನು ವಾಪಸ್ ಪಡೆಯುವುದಕ್ಕೆ ನಿಮ್ಮ ಅಧಿಕಾರಿಗಳಿಗೆ ಸೂಚನೆ ಕೊಡಬೇಕು.

ಅಧ್ಯಕ್ಷರು: ಆಯಿತು. ಪ್ರಶ್ನೋತ್ತರ ಪ್ರಾರಂಭ ಮಾಡೋಣ. ಶ್ರೀ.ಎಸ್.ಟಿ. ಸೋಮಶೇಖರ್‌ರವರುನಿಮ್ಮ ಪ್ರಶ್ನೆ ಕೇಳಿ.